# ಡಾ. ಬಿ. ಆರ್. ಅಂಬೇಡ್ಕರ್ ಅವರ ಬದುಕಿನಿಂದ ಕಲಿಯಬೇಕಾದ ಸಂದೇಶ

ರಾಜಕುಮಾರ ಎಂ. ಸಿಂಧೆ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಿದ್ಧಾರ್ಥ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ, ಬೀದರ.

**Received: 24/01/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961338**

## ABSTRACT:

ಕಲಿಕೆ ಎಂಬುದು ಜೀವನದ ಅವಿಭಾಜ್ಯ ಅಂಗವಾಗಿದೆ. ಅದು ನಿತ್ಯ ನಿರಂತರವಾಗಿ ನಡೆಯುವ ಪ್ರಕ್ರಿಯೆ. ಹುಟ್ಟಿನಿಂದ ಸಾವಿನವರೆಗೂ ಜೀವನುದ್ದಕ್ಕೂ ವಿವಿಧ ಜ್ಞಾನಶಾಖೆಗಳ ಮೂಲಕ ಜೀವನಾನುಭವ ಪಡೆಯುತ್ತ, ಹಳೆ ಬೇರು ಹೊಸ ಚಿಗುರು ಎಂಬಂತೆ ಗುರುಹಿರಿಯರ ನಡೆ-ನುಡಿ, ಆಚಾರ ವಿಚಾರಗಳನ್ನು ಅನುಲಕ್ಷಿಸುತ್ತ, ಭವಿಷ್ಯದ ಬದುಕಿನ ಅಗತ್ಯತೆಗಳನ್ನು ಕಲ್ಪಿಸಿಕೊಳ್ಳುತ್ತ ಹಳೆಯ ಮತ್ತು ಹೊಸದರ ಸಮ್ಮಿಶ್ರಣದೊಂದಿಗೆ ಸುಂದರ ಬದುಕು ಕಟ್ಟಿಕೊಳ್ಳಲು 'ಕಲಿಕೆ' ಎಂಬ ಪ್ರಕ್ರಿಯೆ ನಡೆಯುತ್ತಲೇ ಸಾಗುತ್ತದೆ.

'ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠ ಶಾಲೆ' ಯಿಂದ ಆರಂಭವಾಗಿ ಕಲಿಕೆ ಮುಂದುವರೆಯುತ್ತದೆ. 'ದೇಶ ಸುತ್ತು ಇಲ್ಲವೇ ಕೋಶ ಓದು' ಎಂಬಂತೆ ಸಾಹಿತ್ಯ, ಕಾವ್ಯ, ಪುರಾಣ, ಶಾಸ್ತ್ರ, ಕಲೆ ಹೀಗೆ ನೂರಾರು ಪ್ರಕಾರದ ಗ್ರಂಥಗಳ ಅಧ್ಯಯನದ ಮೂಲಕ ಹಾಗೂ ಶಾಲಾ ಶಿಕ್ಷಕರು, ಗುರು-ಹಿರಿಯರಿಂದ, ಮಠಮಾನ್ಯಗಳಿಂದ, ಅನುಭಾವಿಗಳ ಸಂಪರ್ಕಗಳ ಮೂಲಕ ಕಲಿಕೆ ನಡೆಯುತ್ತದೆ. ಅಷ್ಟೇ ಏಕೇ ಪಶು-ಪ್ರಾಣಿ, ಜೀವ ಸಂಕುಲಗಳು, ನಿಸರ್ಗದ ಗಿಡ-ಮರ, ಬೆಟ್ಟ, ನದಿ, ಸರೋವರ, ಗಾಳಿ ಹೀಗೆ ಪ್ರಕೃತಿಯನ್ನು ನೋಡಿಯೂ ಮನುಷ್ಯ ಸಾಕಷ್ಟು ವಿಚಾರಗಳನ್ನು ಕಲಿತುಕೊಳ್ಳುತ್ತಾನೆ. ಹೀಗೆ ಸಾವಿರಾರು ದಾರಿಯಿಂದ ಜ್ಞಾನ ಹರಿದುಬರುತ್ತಲೇ ಇರುತ್ತದೆ. ಇವೆಲ್ಲವೂ ಮನುಷ್ಯನ ಜ್ಞಾನಶಾಖೆಗಳೆಂದು ಕರೆಯಲಾಗುತ್ತದೆ.

ಕೋಶ ಓದುವಿಕೆಯಿಂದ ಒಂದು ರೀತಿಯ ಜ್ಞಾನ ಲಭಿಸುತ್ತದೆ ಎಂಬುದು ನಿಜವೇ. ಆದರೆ ಪ್ರಕೃತಿಯಿಂದ, ಲೋಕಾನುಭವದಿಂದ ದೊರೆಯುವ ಜ್ಞಾನ ಮಹತ್ವದ್ದಾಗುತ್ತದೆ. ಕಾರಣ ಲೋಕಾನುಭವು ಮನುಷ್ಯನಲ್ಲಿ ಮಾನವೀಯತೆ, ಮಾನವೀಯ ಮೌಲ್ಯಗಳ ಮೂಲಕ ಹೃದಯ ಶ್ರೀಮಂತಿಕೆ, ಭಾವಶ್ರೀಮಂತಿಕೆಗೊಳಿಸಿ ಆತನಲ್ಲಿ ಆತ್ಮವಿಶ್ವಾಸ, ಧೈರ್ಯ ತುಂಬುತ್ತದೆ. ಭಕ್ತಿ, ಶ್ರದ್ದೇ, ಸತತ ಪ್ರಯತ್ನ, ಪ್ರಮಾಣಿಕತೆ, ನ್ಯಾಯ-ನೀತಿ, ಹಸಿವು, ನೋವು-ನಲಿವು ಮುಂತಾದವುಗಳ ಅನುಭವ ನೀಡುತ್ತದೆ. ಅಲ್ಪವಿರಾಮದಿಂದ ಪೂರ್ಣ ವಿರಾಮದೆಡೆಗೆ, ಸಂಶಯದಿಂದ ನಿಸ್ಸಂಶಯದೆಡೆಗೆ, ಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ,

ದೃಢತೆಯಿಂದ ಸದೃಢತೆಯೆಡೆಗೆ ಕೊಂಡ್ಯೊಯುತ್ತದೆ.

ಹಸಿದವನಿಗೆ ಮಾತ್ರ ಗೊತ್ತು ಅನ್ನದ ಬೆಲೆ. ಈ ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿನ ಬೆಲೆ, ಮೌಲ್ಯ ಗೊತ್ತಾಗುವುದು ಕಷ್ಟಪಟ್ಟು ದುಡಿದು ಸಂಪಾದಿಸಿದವನಿಗೆ ಮಾತ್ರ. ಅಂದಾಗಲೇ ಆ ವಸ್ತುವಿನ ಸದ್ಬಳಕೆಯು ಸಾಧ್ಯವಾಗುತ್ತದೆ. ಆದ್ದರಿಂದ ಕೆಟ್ಟ ಪರಿಸ್ಥಿತಿಯಲ್ಲಿ ಬದುಕಿ, ನೂರಾರು ಅವಮಾನ, ಸಮಸ್ಯೆಗಳನ್ನು ಎದುರಿಸಿದ ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರು ಅಪ್ಪಟ ದೇಶಾಭಿಮಾನಿಗಳು, ಸ್ವಾಭಿಮಾನಿಗಳು, ಹೋರಾಟಗಾರರು, ತತ್ವನಿಷ್ಠರು, ಜೀವಪರ ಚಿಂತಕರು, ಶಿಕ್ಷಣ ತಜ್ಞರು, ಅರ್ಥಶಾಸ್ತ್ರಜ್ಞರು, ಸಮಾಜಸುಧಾಕರು, ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಗಳು ಆಗಿದ್ದಾರೆ.

2011ರಲ್ಲಿ ಇಂಗ್ಲೆಂಡ್‌ನ ಕೆಂಬ್ರಿಡ್ಜ ವಿಶ್ವವಿದ್ಯಾಲಯವು ಜಗತ್ತಿನ ಅತ್ಯಂತ ಶ್ರೇಷ್ಠ ವಿದ್ವಾಂಸರ ಸರ್ವೇ ನಡೆಸಿ, ಅದರಲ್ಲಿ ನೂರು ಜನ ಶ್ರೇಷ್ಠ ವಿದ್ವಾಂಸರ ಪಟ್ಟಿ ತಯ್ಯಾರಿಸಿತ್ತು. ಆ ನೂರು ಜನ ಘನ ವಿದ್ವಾಂಸರ ಪಟ್ಟಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ ಅವರೇ ಮೊಟ್ಟ ಮೊದಲಿಗರಾಗಿದ್ದಾರೆ. ಜಗತ್ತಿನ ಹತ್ತಾರು ಸಂವಿಧಾನಗಳನ್ನು ಅಧ್ಯಯನ, ಅನುಶೀಲನಗೈದು, ಈ ನಮ್ಮ ಭಾರತ ದೇಶಕ್ಕೆ ಅಗತ್ಯವೆನಿಸುವ ಸರ್ವ ಜನಾಂಗದ ಶಾಂತಿಯ ತೋಟವಾಗಿ ನಿರ್ಮಿಸಲು, ಸಕಲ ಜೀವರಾಶಿಗಳ ಏಳಿಗೆಯನ್ನು ಗಮನದಲ್ಲಿರಿಸಿಕೊಂಡು ಜಗತ್ ಪ್ರಸಿದ್ಧವಾದ ಸಂವಿಧಾನ ರಚಿಸಿ, ಸಂವಿಧಾನ ಶಿಲ್ಪಿಯಾಗಿದ್ದಾರೆ. ಡಾ. ಬಿ. ಆರ್. ಅಂಬೇಡ್ಕರ ಅವರು ಆರಂಭಿಕ ಜೀವನ, ಶೈಕ್ಷಣಿಕ ಸಾಧನೆ, ಧಾರ್ಮಿಕ, ಸಾಮಾಜಿಕ, ರಾಜಕೀಯ ಹೋರಾಟ ಮಾಡಿ ಗಗನದೆತ್ತರಕ್ಕೆ ಬೆಳದುನಿಂತ ಅವರ ಪರಿಯು ಜಗತ್ತನ್ನೇ ಬೆರಗುಗೊಳಿಸುತ್ತದೆ. ಅವರ ಜೀವನದ ಪ್ರತಿಯೊಂದು ಹೆಜ್ಜೆಗಳು, ಪ್ರತಿ ಉಸಿರು ಜಗತ್ತಿಗೆ ಮಾದರಿಯಾಗಿವೆ. ಅವರು ನಡೆದು ಬಂದ ದಾರಿಯನ್ನು ಅವಲೋಕಿಸುತ್ತ, ಅನುಸರಿಸುತ್ತ, ಮುನ್ನಡೆದು ಬದುಕು ಹಸನುಗೊಳಿಸಿಕೊಳ್ಳಬೇಕಾಗಿದೆ. ಅಂತಹ ಮೇರು ಸಾಧಕರ ಸಾಧನೆ ಕುರಿತು ಅರಿತುಕೊಳ್ಳುವ ಸಣ್ಣದಾದ ಪ್ರಯತ್ನ ಇಲ್ಲಿ ಮಾಡಲಾಗಿದೆ.

**KEYWORDS:**

ಸಂವಿಧಾನ ಶಿಲ್ಪಿ, ಬ್ಯಾರಿಸ್ಟರ್ ಪದವಿ, ಪರಿಶ್ರಮಶೀಲತೆ, ಹೋರಾಟ, ಹಿಂದು ಕೋಡ ಬಿಲ್, ಸ್ವಾಭಿಮಾನಿ, ಶಿಸ್ತು, ಸಮಾನತೆ.

## ಡಾ. ಬಿ. ಆರ್. ಅಂಬೇಡ್ಕರ ಆರಂಭಿಕ ಜೀವನ:

ಮಹಾರಾಷ್ಟ್ರ ನೆಲೆದಲ್ಲಿ, ಮಹಾರ್(ದಲಿತ) ಜನಾಂಗದಲ್ಲಿ ಮಹಾನಾಯಕ ಡಾ. ಬಿ. ಆರ್. ಅಂಬೇಡ್ಕರ ಅವರು ಜನಿಸಿದರು. ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬೇವಾಡೆ ಗ್ರಾಮದ ರಾಮಜಿ ಸಕ್ಪಾಲ್, ಮತ್ತು ಭೀಮಾಬಾಯಿಯವರ ಪವಿತ್ರ ಉದರದಲ್ಲಿ 1891 ಎಪ್ರಿಲ್ 14 ರಂದು 14ನೇ ಪುತ್ರನಾಗಿ ಭೀಮ ಜನಿಸುತ್ತಾರೆ.

ಭೀಮನು ಕೇವಲ 5 ವರ್ಷದ ಮಗುವಿರುವಾಗಲೇ ತಾಯಿ ಭೀಮಾಬಾಯಿಯನ್ನು ಕಳೆದುಕೊಂಡು ತಾಯಿಯಿಲ್ಲದ ತಬ್ಬಲಿಯಾಗುತ್ತಾರೆ. ಮಗುವಿನ ಆರೈಕೆ, ಲಾಲನೆ ಪಾಲನೆಯ ಹೊರೆಯನ್ನು ಸೋದರತ್ತೆಯವರು ಹೊತ್ತುಕೊಳ್ಳುತ್ತಾರೆ. ಮುಂದೆ 1913ರಲ್ಲಿ ರಾಮಜಿ ಸಕ್ಪಾಲ ಅವರು ಸಹ ವಿಧಿವಶವಾಗುತ್ತಾರೆ. ಬೆಳವಣಿಗೆಯಾಗಬೇಕಾದ ಕಾಲ ಸಂದರ್ಭದಲ್ಲಿ ತಂದೆ-ತಾಯಿಯರ ಆಶ್ರಯ ಕಳೆದುಹೋಗುತ್ತದೆ.

ಭೀಮರಾವ ಅಂಬೇಡ್ಕರ ಅವರ ಪ್ರಾಥಮಿಕ ಶಿಕ್ಷಣ ಸತಾರದಲ್ಲಿ ಆರಂಭಗೊಳ್ಳುತ್ತದೆ. ಮುಂಬೈನಲ್ಲಿ ಪ್ರೌಢ ಶಿಕ್ಷಣ ಮುಗಿಸಿಕೊಂಡು ಉನ್ನತ ವ್ಯಾಸಂಗಕ್ಕೆ ಬರೋಡಾ ಮಹಾರಾಜರಾದ ಸಯ್ಯಾಜಿರಾವ ಗಾಯಕವಾಡ ಅವರು ಅಂಬೇಡ್ಕರ ಅವರಿಗೆ ಉನ್ನತ ವ್ಯಾಸಂಗಕ್ಕಾಗಿ ಮಾಸಿಕವಾಗಿ ರೂ. 25 ಶಿಷ್ಯವೇತನ ಮಂಜೂರು ಮಾಡುತ್ತಾರೆ. ಅವರ ಆರ್ಥಿಕ ನೆರವನ್ನು ಪಡೆದುಕೊಂಡು ಅಮೇರಿಕಾ, ಲಂಡನ್, ಇಂಗ್ಲೇಂಡ್ ಮುಂತಾದ ದೇಶ ವಿದೇಶಗಳಲ್ಲಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿ, ರಾಜಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರಗಳಲ್ಲಿ ಎಂ.ಎ. ಮತ್ತು ಪಿಹೆಚ್.ಡಿ, ಪದವಿಗಳು, ಕಾನೂನು ಶಾಸ್ತ್ರ, ಬಾರ್. ಎಟ್ ಲಾ,. ಬ್ಯಾರಿಸ್ಟರ್ ಪದವಿಗಳು ಸೇರಿದಂತೆ ಒಟ್ಟು 32 ಪದವಿಗಳನ್ನು ಪಡೆದುಕೊಂಡ ಮಹಾಜ್ಞಾನಿ ಡಾ. ಬಿ. ಆರ್ ಅಂಬೇಡ್ಕರ.

ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರಿಗೆ ಒಂದು ಕಡೆ ಕೆಟ್ಟ ಜಾತಿ ವ್ಯವಸ್ಥೆಯ ಸಮಸ್ಯೆ, ಇನ್ನೊಂದು ಕಡೆ ಕಿತ್ತು ತಿನ್ನುವ ಬಡತನ. ಇಂತಹ ನೂರಾರು ಸಮಸ್ಯೆಗಳಿವೆ ಎಂಬುದು ಕಣ್ಣಾರೆ ಕಂಡು ಜೀವನದಲ್ಲಿ ಆ ನೋವು ಅವಮಾನಗಳನ್ನು ಅನುಭವಿಸುತ್ತಲೇ ಆ ಸಮಸ್ಯೆಗಳಿಂದಾದ ಅನುಭವಗಳನ್ನೇ ಸವಾಲನ್ನಾಗಿ ಸ್ವೀಕಸಿರಿದರು. ಕಮಲದ ಹೂವು ತನ್ನ ಸುತ್ತಲಿರುವ ಕೆಸರು, ಗಲೀಜು ನೀರು, ಬಿಸಿಲು, ಗಾಳಿಗಳನ್ನೇ ಸತ್ವವನ್ನಾಗಿ ಸ್ವೀಕರಿಸಿ ಗಿಡ ಹಚ್ಚ ಹಸುರಾಗಿ ಬೆಳೆಯುವಂತೆ ಡಾ. ಬಿ. ಆರ್ ಅಂಬೇಡ್ಕರ ಅವರು ತಾನು ಹುಟ್ಟಿದ ಜಾತಿ ಸಮಸ್ಯೆಯಾಗಲಿ, ಕಿತ್ತು ತಿನ್ನುವ ಬಡತನವಾಗಲಿ, ಸಮಾಜದಲ್ಲಿ ಅವಮಾನಗಳನ್ನಾಗಲಿ ಸಮಸ್ಯೆಗಳೆಂದು ಪರಿಗಣಿಸದೇ ಅವುಗಳನ್ನು ಸತ್ವವನ್ನಾಗಿ ಸ್ವೀಕರಿಸಿ, ಛಲವಾದಿಯಾಗಿ, ಸ್ವಾಭಿಮಾನಿಯಾಗಿ. ಸತತ ಪರಿಶ್ರಮಶೀಲತೆಯಿಂದ ಅಧ್ಯಯನ ಮಾಡಿ ಸರ್ವಶ್ರೇಷ್ಠ ಜ್ಞಾನಿಯಾಗಿ ಎತ್ತರೆತ್ತರಕ್ಕೆ ಬೆಳೆದು ನಿಂತಿದ್ದಾರೆ. ಸಾಧಕನಿಗೆ ಸಾವಿರಾರು ತೊಡಕುಗಳು ಎದುರಾದರೂ ಸಾಧಿಸುವ ಛಲವಿದ್ದರೆ ಎಲ್ಲ ತೊಡಕುಗಳು, ಸಮಸ್ಯೆಗಳು ಒಂದು ವರವಾಗಿಯೇ ಸ್ವೀಕರಿಸುತ್ತಾನೆ.

ಡಾ. ಬಿ. ಆರ್. ಅಂಬೇಡ್ಕರ ಅವರು ಹುಟ್ಟಿ ಬೆಳೆದದ್ದು ಬಡತನ ಮನೆತನದಲ್ಲಿ ಎಂದರೆ ಆರ್ಥಿಕ ಬಡತನ, ಅಕ್ಷರ ಜ್ಞಾನದ ಬಡತನ ಎಂಬರ್ಥದಲ್ಲಿ ಅಲ್ಲ. ಡಾ.

ಬಾಬಾ ಸಾಹೇಬ ಅಂಬೇಡ್ಕರ್‌ರವರಿಗೆ ಆರ್ಥಿಕತೆಯ ಬಡತನವಿತ್ತೇ ಹೊರತು ಅವರ ಮನ ಬಡವಾಗಿರಲಿಲ್ಲ. ಓದುವ ಹಂಬಲ, ಸಾಧಿಸುವ ಛಲ ಅಪಾರವಾಗಿತ್ತು. ಸಾಧಕನಿಗೆ ಮನಸ್ಸಿನ ಬಡತನವಿರಬಾರದ್ದು ಎಂಬುದು ಇಲ್ಲಿಯ ತಾತ್ಪರ್ಯ.

ಬರೋಡಾ ಮಾಹಾರಾಜರಿಂದ ಮಾಸಿಕ ರೂ. 25 ಶಿಷ್ಯವೇತನ ಪಡೆದು ಅಮೇರಿಕಾ, ಲಂಡನ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಿ, ಎಂ.ಎ. ಪಿಹೆಚ್‌ಡಿ, ಬ್ಯಾರಿಸ್ಟರ್ ಅಂತಹ ಅತೀ ದೊಡ್ಡ ದೊಡ್ಡ ಪದವಿ ಗಳಿಸಿದ್ದರು. ಇಲ್ಲಿ ಶಿಷ್ಯವೇತನ ಬಹಳ ಮುಖ್ಯವಾಗಿ ಕಾಣುತ್ತದೆ. ಸಾಧಕರಿಗೆ ನೂರಾರು ಅಡೆತಡೆಗಳು ಎದುರಾಗಬಹುದು. ಅದಕ್ಕೆ ಯಾರಾದರೂ ಸಹಾಯ ಮಾಡಿದಾಗ ಅದರ ಸದ್ಬಳಕೆ ಮಾಡಿಕೊಳ್ಳುವುದು ಅಷ್ಟೇ ಮುಖ್ಯ. ಸಹಾಯ ಮಾಡಿದವರ ಮೂಲ ಉದ್ದೇಶ ಎಂದರೆ ಸಾಧನೆಯ ಗುರಿ ತಲುಪುವ ಮೂಲಕ ಈಡೇರಿಸುವುದು. ಸಾಧನೆಯ ಮಾರ್ಗದಲ್ಲಿ ಮುನ್ನುಗುವವರಿಗೆ ಸಹಾಯ ಹಸ್ತದ ಅವಶ್ಯಕತೆಯಿರುತ್ತದೆ. ಸಣ್ಣ (ಶಿಷ್ಯವೇತನ) ಸಹಾಯ ಪಡೆದುಕೊಂಡು ಉನ್ನತ ಶಿಖರಕ್ಕೇರುವುದು ಸಾಧಕನ ಲಕ್ಷಣ.

**ಮೊಟ್ಟ ಮೊದಲಿಗರು ಡಾ. ಬಿ. ಆರ್. ಅಂಬೇಡ್ಕರ:**

1917ರಲ್ಲಿ ಅಮೇರಿಕಾದ ಕೋಲಂಬಿಯಾ ವಿಶ್ವವಿದ್ಯಾಲಯದಿಂದ The National Divident of India– A Historical and Analytical Study ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದು, ಡಾಕ್ಟರೇಟ್ ಪದವಿ ಪಡೆದ ಮೊಟ್ಟ ಮೊದಲ ಭಾರತೀಯ ಎನಿಸಿಕೊಂಡರು. ಅರ್ಥಶಾಸ್ತ್ರದಲ್ಲಿ Dsc. ಪದವಿ, ಕಾನೂನು ಶಾಸ್ತ್ರದಲ್ಲಿ BAR AT–LAW ಪದವಿ ಪಡೆದ ಮೊಟ್ಟಮೊದಲ ಭಾರತೀಯ ಏಕೈಕ ವ್ಯಕ್ತಿ ಎನಿಸಿಕೊಂಡರು. ತನ್ನ ಮನೆಯೇ ಒಂದು ಗ್ರಂಥಾಲಯವನ್ನಾಗಿ ಮಾಡಿಕೊಂಡು ಸುಮಾರು 50 ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿರುವ ಜಗತ್ತಿನ ಏಕೈಕ ಘನ ವಿದ್ವಾಂಸರು ಎಂಬ ಖ್ಯಾತಿ ಗಳಿಸಿದರು. ಹೀಗೆ ಜಾಗತೀಕ ಮಟ್ಟದಲ್ಲಿ ತನ್ನ ಹೆಸರನ್ನು ಮೊಟ್ಟ ಮೊದಲ ಸಾಲಿನಲ್ಲಿ ಪ್ರತಿಫಲಿಸುವಂತಹ ಸಾಧನೆಗೈದ ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರ ಜ್ಞಾನತೃಷೆಯನ್ನು ಅರಿತುಕೊಳ್ಳಬೇಕಾಗಿದೆ.

ದಿನದ 24 ಗಂಟೆಗಳಲ್ಲಿ 18ಗಂಟೆಗಳ ಕಾಲ ಅಧ್ಯಯನ, ಅನುಶೀಲ, ಚಿಂತನ–ಮಂಥನಗಳಲ್ಲಿಯೇ ಕಳೆಯುತ್ತಿದ್ದರಂತೆ. ಇಂದಿನ ಕಾಲ ಸಂದರ್ಭದಲ್ಲಿ ಓದುವ ಹವ್ಯಾಸ ಮಕ್ಕಳಲ್ಲಿ ಬಹಳಷ್ಟು ಕಡಿಮೆಯಿರುವುದು ಕಂಡುಬರುತ್ತಿದೆ. ಶಾಲಾ ಕಾಲೇಜುಗಳಲ್ಲಿ ಪ್ರವೇಶ ಪಡೆದು ಅಧ್ಯಯನ ಮಾಡಿ, ವಿಷಯದ ಆಳಕ್ಕಿಳಿಯುವ ಮನಸ್ಸುಗಳ ಕೊರತೆ ಕಾಣುತ್ತಿವೆ. ಓದುವಿಕೆಯ ತೃಷೆಯಿರುವವರ ಸಂಖ್ಯೆ ವಿರಳ.

ಮತ್ತು ಅತಿ ಹೆಚ್ಚು ಓದುವ ಮೂಲಕ ತನ್ನ ಜ್ಞಾನದ ಮಟ್ಟದ ಹೆಚ್ಚಿಸಿಕೊಳ್ಳಬೇಕೆನ್ನುವ ಮನೋಭಾವ ಮಾಯವಾಗಿ, ಅನ್ಯ ಮಾರ್ಗವನ್ನು ಅನುಸರಿಸಿ ಸರ್ಟಿಫಿಕೇಟ್ ಪಡೆದುಕೊಳ್ಳುವವರ ಗುಂಪು ಬೆಳೆಯಲಾರಂಭಿಸಿವೆ. ಇಂತಹ ದುರ್ಮಾರ್ಗಿಗಳು, ಸೋಮಾರಿಗಳು, ಭೋಗ ವಿಲಾಸಿಗಳು, ಡಾಂಭಿಕರುಗಳು ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರ ಹೋರಾಟ ಮತ್ತು ಏರಿದ ಮೇರು ಪರ್ವತದ ಹೆಜ್ಜೆಯ ಗುರುತುಗಳನ್ನು ಅವಲೋಕಿಸಬೇಕಾಗಿದೆ.

**ಡಾ. ಬಿ. ಆರ್. ಅಂಬೇಡ್ಕರ ಅವರ ದೇಶ ಪ್ರೇಮ:**

ಡಾ. ಬಾಬಾ ಸಾಹೇಬ ಅಂಬೇಡ್ಕರ ಒಬ್ಬ ಅಪ್ಪಟ ದೇಶ ಪ್ರೇಮಿಗಳಾಗಿದ್ದರು ಎಂಬುದು ಅವರ ಕಾರ್ಯಸಾಧನೆಗಳೇ ಸಾಕ್ಷಿಭೂತವಾಗಿವೆ.

**ಇವನಾರವ ಇವನಾರವ**
**ಇವನಾರವ ಎಂದೆನಿಸರಿದಯ್ಯ**
**ಇವ ನಮ್ಮವ ಇವ ನಮ್ಮವ**
**ಇವ ನಮ್ಮವ ಎಂದೆನಿಸಿರಯ್ಯ ಕೂಡಲಸಂಗಮದೇವ**
**ಇವ ನಿಮ್ಮ ಮನೆಯ ಮಗನೆಂದೆನಿಸಯ್ಯ**

**–ಬಸವಣ್ಣ**

**ಕುಲ ಕುಲವೆಂದು ಹೊಡೆದಾಡದಿರಯ್ಯ**
**ನಿಮ್ಮ ಕುಲದ ನೆಲೆಯನ್ನಾದರೂ ಬಲ್ಲಿರಾ**
**ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವವನೇ ಕುಲಜ**

**–ಕನಕದಾಸ**

ಎಂದು ಬಸವಣ್ಣ, ಕನಕದಾಸರಂತಹ ಅನೇಕ ಮಹಾತ್ಮರು ಸಮಾಜದಲ್ಲಿನ ಜಾತಿ ಕುಲ ಗೋತ್ರ, ಮೂಢನಂಬಿಕೆ, ಅಂಧಶ್ರದ್ದೇ, ಮೇಲು–ಕೀಳು, ಹೆಣ್ಣು–ಗಂಡು ಎಂಬ ಭೇಧವನ್ನಳಿಸಿ ಸಕಲ ಜೀವಾತ್ಮರನ್ನು ಪ್ರೀತಿಸಲು ಕಲಿಸಿದರು. ಅಂತಹ ಮಹಾತ್ಮರ ಸಾಲಿನಲ್ಲಿ ನಿಲ್ಲುವ ಮಹಾನ ಚೇತನ ಡಾ. ಬಿ.ಆರ್. ಅಂಬೇಡ್ಕರ.

ಅವರು ಬ್ರಿಟಿಷ ಭಾರತ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಗ 20–07–1942ರಲ್ಲಿ ಒಂದು ಕಾನೂನು ಜಾರಿಗೆ ತಂದು, ಅದರ ಮೂಲಕ ದಲಿತ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯವಾಗಲೆಂದು ವಿದ್ಯಾರ್ಥಿವೇತನ ನೀಡುವುದು, ಸರ್ಕಾರಿ ಹುದ್ದೆಯಲ್ಲಿರುವ ಮಹಿಳೆಯರಿಗೆ ಹೆರಿಗೆ ರಜೆ ಮತ್ತು ಹೆರಿಗೆ ಭತ್ಯೆ ನೀಡುವುದು, ಸರ್ಕಾರಿ ಮತ್ತು ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಕೆಲಸದ ಅವಧಿಯನ್ನು 12ಗಂಟೆಯಿಂದ 8ಗಂಟೆಗೆ

ಇಳಿಕೆ ಮಾಡಿಸಿದ್ದಾರೆ. ಈ ಮೂಲಕವಾಗಿ ಸಮಾಜದ ಕಟ್ಟ ಕಡೆಯ ಜನರಿಗೂ ಶಿಕ್ಷಣ ಸುಲಭವಾಗಿ ದೊರಕುವಂತಾಗಬೇಕು. ಮಹಿಳೆಯರು ಸಹ ತಮ್ಮ ಆರೋಗ್ಯದ ಕಡೆ ವಿಶೇಷ ಗಮನಹರಿಸಿರುವುದು. ಇನ್ನು ಕೂಲಿ ಕಾರ್ಮಿಕರು 12 ಗಂಟೆಗಳ ಕಾಲ ದಣಿವರಿಯದೇ ದುಡಿಯುವ ವರ್ಗಕ್ಕೆ ಕಡಿಮೆ ಅವಧಿ ನಿಗದಿ ಮಾಡುವ ಮೂಲಕ ಅವರ ಆರೋಗ್ಯದ ಕಡೆಗೆ ವಿಶೇಷ ಕಾಳಜಿ ಮತ್ತು ಶ್ರಮಿಕ ವರ್ಗದ ಶ್ರಮಕ್ಕೆ ಬೆಲೆ ತಂದುಕೊಟ್ಟಿರುವುದು ಗಮನಾರ್ಹ.

9-9-1951ರಲ್ಲಿ 'ಹಿಂದು ಕೋಡ್‌ಬಿಲ್' ಮಂಡಿಸಿ, ಅದರಲ್ಲಿ ಮಹಿಳೆಯರಿಗೂ ಆಸ್ತಿಯ ಹಕ್ಕು, ದತ್ತು ಸ್ವೀಕಾರ ಹಕ್ಕು, ಮಹಿಳೆಯರಿಗೂ ವಿಚ್ಛೇಧನ ಪಡೆಯುವ ಹಕ್ಕು ಸಿಗುವಂತಾಗಬೇಕೆಂದು ನಮೂದಿಸಲಾಗಿತ್ತು. ಇದಕ್ಕೆ ಸಂಸತ್‌ನಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರು ಮಂಡಿಸಿದ ಪ್ರಸ್ತಾವನೆಗೆ ಮನ್ನಣೆ ದೊರಕದೇ ಇದ್ದಾಗ, ತಮ್ಮ ಕಾನೂನು ಮಂತ್ರಿ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸುತ್ತಾರೆ. ಮಹಿಳೆಯರಿಗೆ ಸಮಾನ ಅವಕಾಶ ನೀಡದೆ ಇರುವ ಅಧಿಕಾರ ನನಗೆ ಬೇಡವೆಂದು ತನ್ನ ಅಧಿಕಾರವನ್ನೇ ತ್ಯಜಿಸಿದ ಏಕೈಕ ರಾಜಕಾರಣಿ ಡಾ. ಬಾಬಾ ಸಾಹೇಬ ಅಂಬೇಡ್ಕರ.

ಸಮಾಜದಲ್ಲಿ ಯಾವುದೇ ಜಾತಿ, ಕುಲ ಗೋತ್ರ, ಶ್ರೀಮಂತ-ಬಡವ ಎಂಬ ಭೇಧಭಾವಿಲ್ಲದೆ ಎಲ್ಲ ಮಹಿಳೆಯರ ಬಗೆಗೆ ವಿಶೇಷ ಕಾಳಜಿ, ಎಲ್ಲ ಶ್ರಮಿಕ ವರ್ಗದವರ ಶ್ರಮಕ್ಕೆ ಬೆಲೆ ನೀಡಿದ್ದಾರೆ. ದೇಶದ ಪ್ರತಿಯೊಬ್ಬ ನಾಗರಿಕರೂ ಸುಖವಾಗಿ, ಆರೋಗ್ಯಕರವಾಗಿ, ನೆಮ್ಮದಿಯಿಂದ ಜೀವಿಸುವಂತಾಗಬೇಕು. ಸಕಲ ಜೀವರಾಶಿಗಳ ಕಲ್ಯಾಣವಾಗಬೇಕು ಎಂಬುದು ಒಬ್ಬ ರಾಜಕೀಯ ವ್ಯಕ್ತಿಯ ಧ್ಯೆಯವಾಗಬೇಕು. ಅಂತಹ ಸರ್ವ ಜನಾಂಗದ ಕಲ್ಯಾಣಕ್ಕಾಗಿ ತನ್ನ ರಾಜಕೀಯ ಜೀವನ ನಡೆಸಿದ ಏಕೈಕ ವ್ಯಕ್ತಿ ಡಾ. ಬಾಬಾ ಸಾಹೇಬ ಅಂಬೇಡ್ಕರ. ದೇಶದ ಮಹಿಳೆಯರ, ದೀನ ದಲಿತರ, ಕೂಲಿ ಕಾರ್ಮಿಕರ, ಬಡವರ ಕಲ್ಯಾಣ ಸಾಧಿಸುವುದಕ್ಕಾಗಿ ರಾಜಕೀಯ ಮಾಡಬೇಕೆ ಹೊರತು ತನ್ನ ಸ್ವಾರ್ಥ ಸಾಧನೆಗಾಗಿ ಅಲ್ಲ ಎಂಬುದು ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರಿಂದ ಅರ್ಥಮಾಡಿಕೊಳ್ಳಬೇಕಿದೆ.

**ಮಹಾದಾನಿ ಡಾ. ಬಿ. ಆರ್. ಅಂಬೇಡ್ಕರ:**

ವಿದ್ಯಾದಾನ, ಅನ್ನದಾನ, ಹಣದಾನ, ರಕ್ತದಾನ ಹೀಗೆ ನೂರಾರು ದಾನದ ಸ್ವರೂಪಗಳನ್ನು ಕಾಣುತ್ತೇವೆ. ನಿಸ್ವಾರ್ಥ, ನಿರಪೇಕ್ಷಿತ, ನಿರಹಂಕಾರ ಭಾವದಿಂದ ಇನ್ನೊಬ್ಬರ ಸಂತೋಷಕ್ಕಾಗಿ, ಅವರ ಹಿತಕ್ಕಾಗಿ, ಪರೋಪಕಾರಕ್ಕಾಗಿ ನೀಡಲಾಗುವ ಯಾವ ಸ್ವರೂಪದ್ದಾದರೂ ಸರಿಯೇ ಅದು ದಾನ ಎನಿಸಿಕೊಳ್ಳುತ್ತದೆ. ಎಲ್ಲ ಮಾನವರಿಗಾಗಿ, ಸಕಲ ಜೀವರಾಶಿಗಳಿಗಾಗಿ ತನ್ನ ವೈಯಕ್ತಿಕ ಸುಖಾಪೇಕ್ಷೆಯಿಲ್ಲದೆ, ನಿಸ್ವಾರ್ಥ, ನಿರಪೇಕ್ಷಿತವಾಗಿ ತನ್ನ ಬದುಕಿನ ಎಲ್ಲ ಸಮಯವನ್ನು ಮೀಸಲಾಗಿರಿಸಿದವರು

ಡಾ. ಬಿ.ಆರ್ ಅಂಬೇಡ್ಕರ.

ಡಾ. ಬಿ. ಆರ್. ಅಂಬೇಡ್ಕರ ಅವರು 1942ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಗಳಾಗಿ, 1951ರಲ್ಲಿ ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಗಳಾಗಿ ಸೇವೆ ಸಲ್ಲಿಸಿದರು. ಇನ್ನು 29-08-1947ರಲ್ಲಿ ಭಾರತ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ನೇಮಕವಾಗುತ್ತಾರೆ. 2 ವರ್ಷ, 11 ತಿಂಗಳು, 18 ದಿನಗಳ ಕಾಲಾವಧಿಯಲ್ಲಿ ಸುಧೀರ್ಘ ಅಧ್ಯಯನ ನಡೆಸಿ, ಹಗಲು ರಾತ್ರಿ ಎನ್ನದೇ ಪರಿಶ್ರಮಪಟ್ಟು ಸರ್ವರಿಗೂ ಸಮಪಾಲು, ಸಮಬಾಳು ನೀಡುವಂತಹ ಜಗತ್ತಿಗೆ ಮಾದರಿಯಾದಂತಹ ಅದ್ಭುತ ಸಂವಿಧಾನ ರಚಿಸಿ ಸಂವಿಧಾನ ಪಿತಮಹಾರಾದರು.

ದೇಶ ನನಗೇನು ಕೊಟ್ಟಿದೆ ಎನ್ನುವುದಕ್ಕಿಂತ ದೇಶಕ್ಕೆ ನಾನು ಏನು ಕೊಟ್ಟಿದ್ದೇನೆ ಎನ್ನುವುದು ಬಹಳ ಮುಖ್ಯ. ಭಾರತ ದೇಶ ಜಾತಿ ವರ್ಣ, ವರ್ಗ ವ್ಯವಸ್ಥೆಯಿಂದ ಕೂಡಿದ್ದು, ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರ ಬದುಕಿನುದ್ದಕ್ಕೂ ಈ ವ್ಯವಸ್ಥೆಯಿಂದ ಸಾವಿರಾರು ಅವಮಾನ, ಅಪಮಾನಗಳು, ಶೋಷಣೆ, ತೊಂದರೆಗಳನ್ನು ಅನುಭವಿಸುತ್ತ ಬಂದಿದ್ದಾರೆ. ಆದರೆ ಅವುಗಳೆಲ್ಲ ಜನರಲ್ಲಿನ ಸರಿಯಾದ ತಿಳುವಳಿಕೆಯ ಕೊರತೆಯಿಂದಾದದ್ದು ಎಂದು ಮನಗಂಡು, ಜನರಲ್ಲಿ ಜಾಗೃತಿ ಉಂಟಾಗಬೇಕಾದರೆ ಸರ್ವರಿಗೂ ಶಿಕ್ಷಣ ಅಗತ್ಯತೆಯನ್ನು, ಆರ್ಥಿಕ ಸಬಲತೆಯನ್ನು, ಸಾಮಾಜಿಕ ಅವಕಾಶಗಳನ್ನು, ಧಾರ್ಮಿಕ ಸ್ವಾತಂತ್ರ್ಯವನ್ನು ಕಾನೂನಿನ ಮೂಲಕ ನೀಡಿ ಸಕಲ ಜೀವರಾಶಿಗಳ ಏಳಿಗೆಯನ್ನು ಸಂವಿಧಾನದ ಮೂಲಕ ಕಲ್ಪಿಸಿಕೊಟ್ಟು ಮಾನವೀಯತೆಯ ಸಾಕಾರ ಮೂರ್ತಿಗಳಾಗಿದ್ದಾರೆ.

ಸರ್ವಾಂಗ ಸುಂದರ ಭಾರತ ನಿರ್ಮಾಣಕ್ಕಾಗಿ ತನ್ನ ಹೋರಾಟವನ್ನು ಮಾಡಿದ ಡಾ. ಬಿ. ಆರ್ ಅಂಬೇಡ್ಕರ ಅವರು ಕಣ್ಣಿದ್ದು ಕುರುಡರಾಗಿರುವವರಿಗೆ ನೋಡುವ ದೃಷ್ಠಿಯನ್ನು, ಕಿವಿಯಿದ್ದು ಕಿವುಡರಾಗಿದ್ದವರಿಗೆ ಶ್ರವಣ ಶಕ್ತಿಯನ್ನು, ನಾಲಿಗೆಯಿದ್ದು ಮೂಕರಾಗಿರುವವರಿಗೆ ಮಾತನಾಡುವ ಧ್ವನಿಯನ್ನು, ಮೂಗಿದ್ದು ವಾಸನೆ ಅನುಭವಿಸದಿರುವವರಿಗೆ ಘ್ರಾಣ ಶಕ್ತಿಯನ್ನು, ಕಾಲಿದ್ದು ಕುಂಟರಾಗಿರುವವರಿಗೆ ನಡೆಯುವ ಚಲನಶಕ್ತಿಯನ್ನು ಸಂವಿಧಾನದಲ್ಲಿ ಕಾನೂನು ಮೂಲಕ ಚೇತನಶಕ್ತಿ ತುಂಬಿದ್ದಾರೆ. ಇದು ನಿಜವಾದ ದೇಶ ಪ್ರೇಮ, ಡಾ. ಬಿ. ಆರ್. ಅಂಬೇಡ್ಕರ ಅವರೇ ನಿಜವಾದ ದೇಶಾಭಿಮಾನಿಗಳು.

**ಸ್ವಾಭಿಮಾನಿ ಡಾ. ಬಿ.ಆರ್. ಅಂಬೇಡ್ಕರ:**

ದಲಿತ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದನ್ನು ಸ್ವತಃ ತಾವೇ ಆ ನೋವನ್ನು ಅನುಭವಿಸಿದರು. ಪ್ರತಿಯೊಬ್ಬರ ಏಳಿಗೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದರಿತ ಡಾ. ಬಿ. ಆರ್ ಅಂಬೇಡ್ಕರ ಅವರು ಭವಿಷ್ಯದ ದಿನಗಳಲ್ಲಿ ದೀನ ದಲಿತ,

ಬಡವ, ಹಿಂದುಳಿದವರಿಗೆ ಅಕ್ಷರ ಜ್ಞಾನ ದೊರಕಲಿ ಎಂಬ ಉದ್ದೇಶದಿಂದ 1944ರಲ್ಲಿ ಪೀಪಲ್ಸ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಅದರಡಿಯಲ್ಲಿ ಸಿದ್ದಾರ್ಥ ಆರ್ಟ್ಸ, ಸೈನ್ಸ, ಕಾನೂನು ಕಾಲೇಜುಗಳನ್ನು ಆರಂಭಿಸಿ ಎಲ್ಲರಿಗೂ ಶಿಕ್ಷಣ ದೊರಕುವಂತೆ ಮಾಡಿದರು.

ಡಾ. ಬಿ. ಆರ್ ಅಂಬೇಡ್ಕರ ಅವರು ತಾವು ರಚಿಸಿರುವ ಲೇಖನ, ಬರವಣಿಗೆ, ಪ್ರಬಂಧ, ಪುಸ್ತಕಗಳನ್ನು ಪ್ರಕಟಿಸಲು ಮೇಲ್ವರ್ಗದವರು ಮುಂದೆ ಬರದೇ ಇದ್ದಾಗ, 1946ರಲ್ಲಿ ಸ್ವತಃ ತಾವೇ 'ಭಾರತ ಭೂಷಣ' ಎಂಬ ಪ್ರೆಸ್ ಆರಂಭಿಸಿ ಅದರ ಮೂಲಕ ತಮ್ಮ ಬರವಣಿಗೆಗಳನ್ನು ಪ್ರಕಟಿಸುವ ಕಾರ್ಯ ನಡೆಸಿದರು.

ನೂರಾರು ಭಾಷೆಗಳು, ಸಾವಿರಾರು ಜಾತಿಗಳು, ನೂರಾರು ಧರ್ಮಗಳು, ಸಾವಿರಾರು ಆಚರಣೆಗಳು, ನಂಬಿಕೆಗಳು ಹೀಗೆ ವೈಶಿಷ್ಟ್ಯತೆಯಿಂದ ಕೂಡಿದ ಭಾರತ ದೇಶದಲ್ಲಿ ದಲಿತ ಕುಟುಂಬದಿಂದ ಬಂದಿರುವ ಡಾ. ಬಿ. ಆರ್. ಅಂಬೇಡ್ಕರ ಅವರಿಗೆ ಮತ್ತು ದಲಿತರಿಗೆ ಧಾರ್ಮಿಕವಾಗಿ, ಸಮಾಜಿಕವಾಗಿ ಯಾವುದೇ ಸ್ಥಾನಮಾನವಿಲ್ಲದೇ ಇರುವುದರಿಂದ ಈ ಹಿಂದು ಧರ್ಮದಲ್ಲಿ ಬದುಕುವುದು ಅರ್ಥವಿಲ್ಲವೆಂದು ತಿಳಿದು 1956 ಅಕ್ಟೋಬರ್ 14ರಂದು ನಾಗಪೂರದಲ್ಲಿ ಬೌದ್ಧಮತಕ್ಕೆ ಮತಾಂತರಗೊಂಡರು. "ನಾನು ಹಿಂದುವಾಗಿ ಹುಟ್ಟಿದ್ದು ನನ್ನ ಕೈಯಲ್ಲಿರಲಿಲ್ಲ, ಆದರೆ ಹಿಂದುವಾಗಿ ಮಾತ್ರ ಸಾಯಲಾರೆ" ಎಂದು 1935ರಲ್ಲಿಯೇ ಘೋಷಣೆ ಮಾಡಿದರು. ಆ ಪ್ರತಿಜ್ಞೆಯನ್ನು ಸುಮಾರು 5 ಲಕ್ಷ ಅನುಯಾಯಿಗಳೊಂದಿಗೆ ಧಮ್ಮ ದೀಕ್ಷೆ ಪಡೆದುಕೊಳ್ಳುವ ಮೂಲಕ ತಮ್ಮ ಸ್ವಾಭಿಮಾನವನ್ನು ಮೆರೆದರು. ಮತ್ತು ಅದೇ ದಿನದಂದು ಸ್ವತಃ ತಾವೇ ಸಿದ್ದಪಡಿಸಿಕೊಂಡಿರುವ 22 ಪ್ರತಿಜ್ಞೆಗಳನ್ನು ಸ್ವೀಕರಿಸಿದರು. ಮತ್ತು ಇತರರಿಗೂ ಬೋಧಿಸಿದರು. ನಿಮಗೆ ಎಲ್ಲಿ ಗೌರವ ಮತ್ತು ಬೆಲೆ ಸಿಗುವುದಿಲ್ಲವೋ ಆ ಕಡೆಗೆ ಎಂದೂ ಹೋಗಬೇಡಿ ಎಂಬ ಸಂದೇಶದ ಮೂಲಕ ಜನರಲ್ಲಿ ಸ್ವಾಭಿಮಾನದ ಕಿಚ್ಚು ಹೊತ್ತಿಸಿದರು.

**ಮಹಾನ್ ಹೋರಾಟಗಾರ ಡಾ. ಬಿ.ಆರ್ ಅಂಬೇಡ್ಕರ:**

ಉನ್ನತ ವ್ಯಾಸಂಗಕ್ಕಾಗಿ ಬರೋಡಾ ಮಹಾರಾಜ ಅವರು ಡಾ. ಬಿ.ಆರ್ ಅಂಬೇಡ್ಕರ ಅವರಿಗೆ ಆರ್ಥಿಕ ನೆರವನ್ನು ನೀಡಿದರು. ಜೊತೆಗೆ ನನ್ನ ವ್ಯಾಸಂಗ ಮುಗಿದ ನಂತರ ಮಹಾರಾಜರ ಆಡಳಿತದಲ್ಲಿ ಬಂದು ಸೇವೆ ಸಲ್ಲಿಸುತ್ತೇನೆ ಎಂಬ ಷರತ್ತು ಪತ್ರಕ್ಕೆ ಸಹಿ ಹಾಕಿದರು. ಅದರಂತೆ ಕಾನೂನು ಅಧ್ಯಯನ ಮುಗಿಸಿಕೊಂಡು ಭಾರತಕ್ಕೆ ಬಂದು ಸೇವೆಯಲ್ಲಿ ನಿರತರಾದ ಡಾ. ಅಂಬೇಡ್ಕರ ಅವರು ಸವರ್ಣಿಯರಿಂದ ನೂರಾರು ನೋವುಗಳು, ಅವಮಾನಗಳು ಎದುರಿಸಬೇಕಾಯಿತು. ಆಗ ನೊಂದ ಹೃದಯದ ಅಂಬೇಡ್ಕರ ಈ ದೇಶದಲ್ಲಿ ಓದು, ಜ್ಞಾನ, ಪ್ರತಿಭೆ ಪಾಂಡಿತ್ಯಕ್ಕೆ ಯಾವುದೇ ಬೆಲೆಯಿಲ್ಲ ಎಂದು ಕಣ್ಣೀರಿಟ್ಟಿದ್ದು ಉಂಟು. ನನ್ನಂತಹ ಒಬ್ಬ ಸುಶಿಕ್ಷಿತರಿಗೆ ಇಷ್ಟೊಂದು

ಅವಮಾನ, ತೊಂದರೆಗಳು ಇರಬೇಕಾದದರೆ, ಓದು ಬರಹವಿಲ್ಲದವರು ಅದೆಷ್ಟು ಸಂಕಷ್ಟ ಎದುರಿಸುತ್ತಿರಬೇಕು ಎಂದುಕೊಂಡು ಹಿಂದುಳಿದವರ, ದಲಿತರ, ಶೋಷಿತರ ಏಳಿಗಾಗಿಯೇ ತನ್ನ ಬದುಕನ್ನು ಮೀಸಲಾಗಿಟ್ಟರು. ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದು, ಪತ್ರಿಕೆಗಳನ್ನು ಆರಂಭಿಸುವುದು ಇತ್ಯಾದಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಪ್ರವರ್ತರಾದರು.

ದಲಿತರ, ಹಿಂದುಳಿದವರ, ಶೋಷಿತರ ಏಳಿಗೆಗಾಗಿ ತನ್ನ ಬದುಕಿನ 85 ಪ್ರತಿಶತ ಸಮಯವನ್ನು ಮೀಸಲಾಗಿಟ್ಟರು. ತನ್ನ ಮಕ್ಕಳ ಸಾವಿನ ಸಂದರ್ಭದಲ್ಲಿ, ಹೆಂಡತಿ ರಮಾಬಾಯಿಯವರ ಅನಾರೋಗ್ಯ ಪರಿಸ್ಥಿತಿಯಲ್ಲಿಯೂ ಧೃತಿಗೆಡದೆ, ಧೈರ್ಯ ತಂದುಕೊಂಡು ಬಡವರ ಏಳಿಗೆಗಾಗಿ ಶ್ರಮಿಸಿದ ಮಹಾನ್ ತ್ಯಾಗಮಯಿ, ಮಹಾನ ಛಲವಾದಿ, ಮಹಾನ ಹೋರಾಟಗಾರರು ಡಾ. ಬಿ. ಆರ್. ಅಂಬೇಡ್ಕರ ಎಂಬುದು ಮರೆಯುವಂತಿಲ್ಲ.

**ಸಮಾರೋಪ:**

ಡಾ. ಬಿ. ಆರ್. ಅಂಬೇಡ್ಕರ ಅವರು ಶಿಕ್ಷಣವೇ ಮನುಷ್ಯನ ಸರ್ವಾಂಗೀಣ ಬೆಳವಣಿಗೆಯ ಪರಿಹಾರ ಸೂತ್ರ ಎಂಬುದನ್ನು ಅರಿತುಕೊಂಡಿದ್ದರು. ಬಾಲ್ಯದಿಂದಲೇ ಬಾಬಾ ಸಾಹೇಬ ಅಂಬೇಡ್ಕರ ಅವರು ಶಿಸ್ತುಬದ್ಧತೆಯಿಂದ ಜೀವನ ನಡೆಸಿದರು. ಶಾಲಾ ಕಾಲೇಜುನಿಂದ ಆರಂಭವಾಗಿ, ಸಂಸತನಲ್ಲಿ ಸಭೆ ಸಮಾರಂಭಗಳಿಗೆ ಹಾಜರಾಗುವಾಗಿನ ವರೆಗೆ ಎಲ್ಲ ಸಂದರ್ಭದಲ್ಲಿಯೂ ಸಮಯ ಪರಿಪಾಲಕರಾಗಿದ್ದರು. ಮತ್ತು ಶಿಸ್ತುಬದ್ಧತೆಯನ್ನು ರೂಢಿಸಿಕೊಂಢಿದ್ದರು. ಬಡತನವೇ ಇರಲಿ, ಶ್ರೀಮಂತಿಕೆಯೇ ಇರಲಿ ಸಾಧಕನಿಗೆ ಸಾಧಿಸುವ ಛಲ, ಸತತ ಪ್ರಯತ್ನ, ಕಠೀಣ ಪರಿಶ್ರಮವಿದ್ದರೆ ಅಸಾಧ್ಯವೆಂಬುದು ಈ ಜೀವನದಲ್ಲಿ ಯಾವುದು ಇಲ್ಲ ಎನ್ನುವುದಕ್ಕೆ ಡಾ. ಬಿ. ಆರ್. ಅಂಬೇಡ್ಕರ ಅವರ ಜೀವನ ಕ್ರಮ, ಸಾಧನಾ ಹಂತಗಳೇ ಸಾಕ್ಷಿಯಾಗಿವೆ. ಪ್ರಪಂಚದಲ್ಲಿ ಸಾಧಕರಿಗೆ ಸಾವಿರಾರು ದಾರಿಗಳು ಇರುತ್ತವೆ. ಡಾ. ಬಿ. ಆರ್. ಅಂಬೇಡ್ಕರವರ ಬದುಕು ಅವಲೋಕಿಸಿದಾಗ ನಮಗೆ ನಿರಂತರ ಪ್ರಯತ್ನ, ಸಾಧಿಸುವ ಛಲ, ಉನ್ನತ ಗುರಿ, ಎಲ್ಲರನ್ನೂ ಪ್ರೀತಿಸುವ ವಿಶಾಲ ಹೃದಯವಂತಿಕೆ, ತಾನು ಹುಟ್ಟಿ ಬೆಳೆದ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕೆಂಬ ಹಂಬಲ, ಅಪ್ಪಟ ಸ್ವಾಭಿಮಾನ, ನ್ಯಾಯ, ನೀತಿ, ಸತ್ಯ, ಪ್ರಮಾಣಿಕತೆ, ಅಹಿಂಸೆ, ಪ್ರೀತಿ ವಾತ್ಸಲ್ಯ ಹೀಗೆ ಸಾವಿರಾರು ಮಾನವೀಯ ಮೌಲ್ಯಗಳ ನಿಧಿ ನಮಗೆ ಗೋಚರಿಸುತ್ತದೆ. ಈ ದೇಶದಲ್ಲಿ ಸಮಾಜದ ಕಟ್ಟ ಕಡೆಯ ಮನುಷ್ಯನು ಕೂಡ ನ್ಯಾಯ, ಉದ್ಯೋಗ, ಸಮಾನತೆ, ಅಧಿಕಾರ, ಗೌರವ ದೊರೆಯುತ್ತಿದೆ ಎಂದರೆ ಅದಕ್ಕೆ ಡಾ. ಬಿ. ಆರ್. ಅಂಬೇಡ್ಕರ ಅವರ ಪರಿಶ್ರಮ ಮತ್ತು ಸಂವಿಧಾನವೇ ಕಾರಣರಾಗಿವೆ. ದೇಶದ ಪ್ರತಿಯೊಬ್ಬ ಪ್ರಜೆಯು

ಅವರ ರುಣಭಾರದಲ್ಲಿರುವುದು ಒಪ್ಪಿಕೊಳ್ಳಬೇಕು ಮತ್ತು ಕೃತಜ್ಞತಾ ಭಾವ ಹೊಂದಿರಲೇಬೇಕು.

## ಪರಾಮರ್ಶನ ಗ್ರಂಥಗಳು:


1. ಶಿವರಾಂ ಎನ್.ಆರ್., (2016), ಡಾ. ಬಾಬಾ ಸಾಹೇಬ ಅಂಬೇಡ್ಕರ ಜೀವನ ಚರಿತ್ರೆ, ಆಶೋಕ ಪಬ್ಲಿಕೇಶನ, ಹಾಸನ.
2. ಚಂದ್ರಶೇಖರ ಭಂಡಾರಿ (ಅನು), (2014), ಸಾಮಾಜಿಕ ಕ್ರಾಂತಿ ಸೂರ್ಯ ಡಾ. ಬಾಬಾಸಾಹೇಬ ಅಂಬೇಡ್ಕರ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.
3. ಅಂಬೇಡ್ಕರ ಬಿ.ಆರ್. (ಮೂಲ), ಕೃಷ್ಣಯ್ಯ ಎ.ಡಿ. (ಅನು), (1996), ಬುದ್ಧ ಮತ್ತು ಆತನ ಧಮ್ಮ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
4. ಅನುಪಮಾ ಹೆಚ್.ಎಸ್. (ಸಂ), (2023), ಬುದ್ಧ ಬೆಳಕಿನಲ್ಲಿ ಅಂಬೇಡ್ಕರ ಭಾರತ, ಲಡಾಯಿ ಪ್ರಕಾಶನ, ಗದಗ.
5. ಮಾಧವರಾವ ಎಂ.ಎಸ್. (ಅನು), (2014), ಡಾ. ಅಂಬೇಡ್ಕರ: ಜೀವನ ಮತ್ತು ಸಾಧನೆ, ಆಶೋಕ ಪಬ್ಲಿಕೇಶನ, ಹಾಸನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.